ಅಸಲು ದಾವೆ ಸಂಖ್ಯೆ - 118/2010
ಪಿಡಬ್ಲ್ಯು - 01
ದಿನಾಂಕಃ 11.04.2023
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ನಂ.1 ಮತ್ತು 2 ರ ಪರ ಶ್ರೀ. ಎಸ್ ಕೆ ವಕೀಲರಿಂದ**

ನನ್ನ ಮುಖ್ಯ ವಿಚಾರಣೆಗೆ ನಾನೇ ಮಾಹಿತಿ ಕೊಟ್ಟಿದ್ದೇನೆ. ಉಳಿದ ವಾದಿಯರು ನಿಮಗೆ ಅಧಿಕಾರ ಪತ್ರ ಕೊಟ್ಟಿದ್ದಾರಾ ಎಂದರೆ ಉಳಿದ ವಾದಿಯರ ಪರವಾಗಿ ನಾನು ನಮ್ಮ ವಕೀಲರಿಗೆ ಮಾಹಿತಿ ನೀಡಿ ನಾನು ಪ್ರಮಾಣಪತ್ರ ಸಲ್ಲಿಸಿದ್ದೇನೆ. ವಾದಪತ್ರದೊಂದಿಗೆ ನೀಡಿರುವ ಶೆಡ್ಯೂಲ್ ಎ ಮತ್ತು ಬಿ ಇವುಗಳ ಕುರಿತು ಮಾಹಿತಿ ಇರುತ್ತದೆ. ಮಹಮ್ಮದಅಕ್ಬರಖಾನ ಯಾವಾಗ ತೀರಿಕೊಂಡಿರುತ್ತಾನೆ ನನಗೆ ಗೊತ್ತಿಲ್ಲ. ಮಹಮ್ಮದಅಕ್ಬರಖಾನನಿಗೆ ಮೂರು ಜನ ಮಕ್ಕಳು. ಮಹಮ್ಮದಅಕ್ಬರಖಾನನಿಗೆ 5 ಜನ ಮಕ್ಕಳು ಇದ್ದರು ಸಹ 3 ಜನ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ನೀಡಿರುವ ಶೆಡ್ಯೂಲ್ ಪ್ರಕಾರ 5 ಜನ ಮಕ್ಕಳು ಇರುತ್ತಾರೆ ಎಂದರೆ ಸರಿಯಲ್ಲ. ಮಹಮ್ಮದ ಅಕ್ಬರಖಾನನಿಗೆ 4 ಜನ ಹೆಣ್ಣುಮಕ್ಕಳು ಒಬ್ಬ ಗಂಡು ಮಗ ಇದ್ದ ಎಂದರೆ ಸರಿಯಲ್ಲ, 2 ಹೆಣ್ಣು ಒಬ್ಬ ಗಂಡು ಮಗ ಇದ್ದ. ಅವರ ಹೆಸರು ನವಾಜಖಾತು, ಮುನ್ವರಖಾತು, ಮಹಿಬೂಬಅಲಿಖಾನ, ಷಹಜಾದಖಾತು ಮತ್ತು ಸಾಹೇಬಖಾತು ಎಂದರೆ ಸರಿಯಲ್ಲ. ನವಾಜಖಾತು, ಮುನ್ವರಖಾತು, ಮಹಿಬೂಬಅಲಿಖಾನ ಇವರು ಮಾತ್ರ ಅವರ ಮಕ್ಕಳು. ನನಗೆ ಇಂಗ್ಲೀಷ ಓದಲು ಬರುವುದಿಲ್ಲ. ಮಹಮ್ಮದಅಕ್ಬರಖಾನ ಇವರ ಮಗಳು ಸಾಹೇಬಖಾತು ಇವಳಿಗೆ ಮಹಿಜೂದ್ದೀನಖಾನ ಅಂತಾ ಮಗ ಇದ್ದ ಎಂದರೆ ಸರಿಯಲ್ಲ. ಮಹಿಜೂದ್ದೀನಖಾನ ಯಾರು ಎಂದರೆ ಆ ರೀತಿ ವ್ಯಕ್ತಿ ಯಾರು ಇರುವುದಿಲ್ಲ. ಸದರಿ ಮಹಿಜೂದ್ದೀನಖಾನನಿಗೆ ಷಹಜಾದಬೇಗಂ ಉರ್ಫ ರೆಹಮಾನಖಾನ ಅಂದರೆ ಪ್ರತಿವಾದಿ ನಂ.1 ಮಗಳು ಇರುತ್ತಾಳೆ ಎಂದರೆ ಸರಿಯಲ್ಲ. ನವಾಜಖಾತುಗೆ ಪ್ರತಿವಾದಿ ನಂ.1 ಸಹೋದರಿಯ ಮೊಮ್ಮಗಳು ಆಗಬೇಕು ಎಂದರೆ ಸರಿಯಲ್ಲ. ಪ್ರತಿವಾದಿ ನಂ.1 ನವಾಜಖಾತುಗೆ ಯಾವುದೇ ಸಂಬಂಧ ಇಲ್ಲ ಸುಳ್ಳು ಸೃಷ್ಟಿ ಮಾಡಿರುತ್ತಾರೆ. ನವಾಜಖಾತು ನನ್ನ ಮುತ್ತಜ್ಜಿಯ ಚಿಕ್ಕಪ್ಪನ ಮಗಳು. ನನ್ನ ಮುತ್ತಜ್ಜಿಯ ಹೆಸರು ಅಹಮ್ಮದಬಿಬಿ. ಅಹಮ್ಮದಬಿಬಿ ಫಿರೋಜಖಾನ ಇವರ ಮಗಳು. ಅಹಮ್ಮದಬಿಬಿ ಫಿರೋಜಖಾನ ಇವರ ಮಗಳು ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಹಮ್ಮದಬಿಬಿ ಫಿರೋಜಖಾನ ಇವರ ಮಗಳು ಅಂತಾ ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ, ಮರಣ ಉತಾರೆ ಹಾಜರುಪಡಿಸಿದ್ದೇನೆ. ನನ್ನ ಅಜ್ಜ ರೆಹಮಾನಖಾನ ಇವರ ಮೊದಲನೆ ಮಗ ರಶೀದಖಾನ.

ರಶೀದಖಾನನಿಗೆ 3 ಜನ ಗಂಡು ಮಕ್ಕಳು, ಒಬ್ಬ ಹೆಣ್ಣು ಮಗಳು ಇದ್ದರು. ರಶೀದಖಾನನಿಗೆ ಮಹಮ್ಮದಖಾನ ಅಂತಾ ಒಬ್ಬ ಮಗ ಇದ್ದ ಎಂದರೆ ಸರಿ. ಸದರಿ ಮಹಮ್ಮದಖಾನ ತೀರಿಕೊಂಡಿರುತ್ತಾನೆ ಎಂದರೆ ಸರಿ. ಸದರಿ ಮಹಮ್ಮದಖಾನನಿಗೆ 2 ಜನ ಗಂಡು ಮಕ್ಕಳು ಒಬ್ಬ ಹೆಣ್ಣು ಮಗಳು ಇರುತ್ತಾರೆ. ಅವರ ಹೆಸರು ಅಕ್ಬರಖಾನ, ಹನೀಫಖಾನ, ಅನ್ವರಿಬೇಗಂ ಎಂದರೆ ಸರಿ. ನನ್ನ ತಾಯಿಯ ಹೆಸರು ಸಲೀಮಾಬೇಗಂ. ಸದರಿ ಸಲೀಮಾಬೇಗಂ ಮಿಯಾಜಖಾನ ಇವರ ಮಗಳು. ನನ್ನ ತಾಯಿಯ ತಾಯಿಯ ಹೆಸರು ಲಾಡಲೆಬೇಗಂ. ನಮ್ಮ ವಂಶ ವೃಕ್ಷದಲ್ಲಿ ಲಾಡಲೇಬೇಗಂ ಇವರ ಹೆಸರು ತೋರಿಸಿದ್ದೇನೆ. ಅವರ ಮಕ್ಕಳ ಹೆಸರಿನಲ್ಲಿ ನನ್ನ ತಾಯಿಯ ಹೆಸರು ಬರೆದಿಲ್ಲ ಎಂದರೆ ಸರಿಯಲ್ಲ, ತಾಹೀರಾಬೇಗಂ ಮತ್ತು ಸಲೀಮಾಬೇಗಂ ಅಂತಾ ಬರೆದಿದ್ದೇನೆ. ಈ ದಾವೆ ಸಲ್ಲಿಸುವ ಕಾಲಕ್ಕೆ ನನ್ನ ತಾಯಿ ಜೀವಂತ ಇದ್ದಳು ಎಂದರೆ ಸರಿ. ಅವರನ್ನು ಈ ದಾವೆಯಲ್ಲಿ ಕಕ್ಷಿಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಅವರನ್ನು ಕಕ್ಷಿಗಾರರನ್ನಾಗಿ ಮಾಡುವ ಅವಶ್ಯಕತೆ ಇರಲಿಲ್ಲ ಆದ್ದರಿಂದ ಮಾಡಿಲ್ಲ. ನನ್ನ ತಾಯಿ ಸುಳ್ಳು ವಂಶವೃಕ್ಷ ಇರುತ್ತದೆ ನನ್ನ ಹೆಸರು ಕಾಣಿಸಬೇಡಿ ನಾನು ಸುಳ್ಳು ದಾವೆಗೆ ಸಹಾಯ ಮಾಡುವುದಿಲ್ಲ ಅಂತಾ ಹೇಳಿದ್ದಕ್ಕೆ ಅವರನ್ನು ಕಕ್ಷಿಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ಲಾಡಲೇಬೇಗಂ ಇವರಿಗೆ ತಾಹೀರಾಬೇಗಂ ಅಂತಾ ಇನ್ನೊಬ್ಬ ಮಗಳು ಇದ್ದು ಅವರು ಜೀವಂತ ಇರುತ್ತಾರೆ ಎಂದರೆ ಸರಿ. ಹುಸೇನಖಾತು ಇವರು ಫಿರೋಜಖಾನ ಇವರ ಮಗಳು. ಫಿರೋಜಖಾನ ಇವರಿಗೆ ಇಬ್ಬರು ಹೆಣ್ಣು ಮಕ್ಕಳು ಮಾತ್ರ ಇದ್ದರು. ಹುಸೇನಖಾತುಗೆ 2 ಜನ ಮಕ್ಕಳು. ಅವರ ಹೆಸರು ನೆನಪಿಲ್ಲ. ಅವರ ಹೆಸರು ಮಹಿಬೂದಾಬೇಗಂ, ರಹಿಮಾನಬೀ ಎಂದರೆ ಸರಿ, ಸಾಕ್ಷಿ ಮುಂದುವರೆದು ರಹಿಮಾನಬೀ ತಪ್ಪು ರಹೀಮಖಾತು ಅಂತಾ ಇರುತ್ತದೆ. ಮಹಿಬೂದಾಬೇಗಂ ಇವರಿಗೆ ಸವುರಾಬೇಗಂ ಅಂತಾ ಮಗಳು ತೋರಿಸಿದ್ದೇವೆ ಎಂದರೆ ಸರಿ. ಸವುರಾಬೇಗಂಗೆ ಮೂರು ಜನ ಗಂಡು ಮಕ್ಕಳು, ಅವರ ಹೆಸರು ಮುಸ್ತಫಾಖಾನ, ರಶೀದಖಾನ ಮತ್ತು ಪಯಾಜಖಾನ. ಸವುರಾಬೇಗಂಗೆ ಒಬ್ಬ ಹೆಣ್ಣು ಮಗಳು ಇರುತ್ತಾಳೆ ಅವರ ಹೆಸರು ಮಲ್ಲಿಕಾಬೇಗಂ. ಸವುರಾಬೇಗಂ ಇವರ ಮಗ ಮುಸ್ತಫಾಖಾನ ತೀರಿಕೊಂಡಿರುತ್ತಾರೆ ಎಂದರೆ ಸರಿ ಅವರ ಮಕ್ಕಳು ಜೀವಂತ ಇರುತ್ತಾರೆ ಎಂದರೆ ಸರಿ. ಅವರ ಹೆಸರು ಹೇಳಲು ಬರುವುದಿಲ್ಲ. ಅವರ ಹೆಸರು ಯುನುಸಖಾನ, ಮಜೀದಖಾನ ಮತ್ತು ಮುನ್ನಿ ಅಂತಾ ಇರುತ್ತಾರೆ ಎಂದರೆ ಇರಬಹುದು.

ಸವುರಾಬೇಗಂ ಇವರ 2 ನೇ ಮಗ ರಶೀದಖಾನ ತೀರಿಕೊಂಡಿರುತ್ತಾರೆ ಎಂದರೆ ಸರಿ

ಅವರ ಮಕ್ಕಳು ಜೀವಂತ ಇರುತ್ತಾರೆ ಎಂದರೆ ಸರಿ. ಅವರ ಹೆಸರು ಅಹಮುದಾ, ತಸ್ಲೀಂ, ಮತ್ತು ವಹೀದಖಾನ. ಸಹಿರಾಬೇಗಂ ಇವರ 3 ನೇ ಮಗಳು ಮಲ್ಲಿಕಾಬೇಗಂ ತೀರಿಕೊಂಡಿರುತ್ತಾರೆ ಎಂದರೆ ಸರಿ ಅವರ ಮಕ್ಕಳು ಜೀವಂತ ಇರುತ್ತಾರೆ ಎಂದರೆ ಸರಿ. ಅವರ ಹೆಸರು ನೆನಪಿಲ್ಲ ಎಷ್ಟು ಜನ ಮಕ್ಕಳು ಇರುತ್ತಾರೆ ನೆನಪಿಲ್ಲ. 2 ನೇ ಪ್ರತಿವಾದಿ ಫಿರೋಜಖಾನ ಇತನ ಮಗ. ಮಹಿಬೂದಾಬೇಗಂ ಇವರ ಮಗ ಫಿರೋಜಖಾನ ಅವರ ಮಗ 2 ನೇ ಪ್ರತಿವಾದಿ ಎಂದರೆ ಸರಿ. 2 ನೇ ಪ್ರತಿವಾದಿಗೆ ಮುಸ್ತಫಾಖಾನ, ದಿಲೇರಖಾನ, ಅಮಾನುಲ್ಲಾಖಾನ, ಸಾಬೀರಾಬೇಗಂ, ಮುಸ್ತಾಕಖಾನ, ಮತ್ತು ಫರೀದಾಬೇಗಂ ಅಂತಾ ಸಹೋದರ ಸಹೋದರಿಯರು ಇರುತ್ತಾರೆ.

ಹುಸೇನಖಾತು ಇವರ 2 ನೇ ಮಗಳು ರಹೀಮಖಾತು ಇವರಿಗೆ 3 ಜನ ಮಕ್ಕಳು, ಅವರ ಹೆಸರು ರವುಫಖಾನ, ಅಹಮ್ಮದಖಾನ ಮತ್ತು ಬಾನುಬೇಗಂ. ಬಾನುಬೇಗಂ ತೀರಿಕೊಂಡಿರುತ್ತಾರೆ. ಬಾನುಬೇಗಂ ಇವರಿಗೆ ಎಷ್ಟು ಜನ ಮಕ್ಕಳು ಗೊತ್ತಿಲ್ಲ. ಅವರಿಗೆ ಅಪ್ತಾಬಖಾನ ಮತ್ತು ಇಮ್ತಿಯಾಜಖಾನ ಅಂತಾ ಇಬ್ಬರು ಮಕ್ಕಳು ಎಂದರೆ ಸರಿ.

ರಹೀಮಖಾತು ಇವರ ಮೊದಲನೇ ಮಗ ರವುಫಖಾನನಿಗೆ ಎಷ್ಟು ಜನ ಮಕ್ಕಳು ಎಂದರೆ 5 ಜನ ಗಂಡು 2 ಹೆಣ್ಣು ಮಕ್ಕಳು. ಅವರ ಹೆಸರು ಫಯಾಜಖಾನ, ಸಕಿಯಾಬೇಗಂ, ರಿಯಾಜಖಾನ, ಅಲ್ತಾಫಖಾನ, ಅಖಲಬಖಾನ, ಅತೀಕಖಾನ ಮತ್ತು ಆಸಿಯಾಬೇಗಂ ಅಂತಾ ಇರುತ್ತಾರೆ. ಫಯಾಜಖಾನ ತೀರಿಕೊಂಡಿರುತ್ತಾರೆ. ಅವರಿಗೆ ಹೆಂಡತಿ ಮತ್ತು ಒಬ್ಬಳು ಮಗಳು ಇರುತ್ತಾರೆ. ಮಗಳ ಹೆಸರು ಶಬಾನಾ. ನವಾಜಖಾತು ನಮಗೆ ಹೇಗೆ ಗೊತ್ತು ಎಂದರೆ ಅವರು ನಮ್ಮ ಅಜ್ಜಿಯ ಖಜೀನ್ ಆದ್ದರಿಂದ ಗೊತ್ತು. ನಾನು ಅವರಿಗೆ ಮರಿಮೊಮ್ಮಗ ಆಗಬೇಕು. ನನ್ನ ಮುತ್ತಜ್ಜಿ ತೋರಿಸಿದ ಕಾರಣ ನನಗೆ ಅವರು ಗೊತ್ತು. 2009 ರಲ್ಲಿ ಮುಸ್ತಾಕಖಾನ ಅವರ ಆಸ್ತಿಯನ್ನು ಮಾರಾಟ ಮಾಡುತ್ತಿದ್ದಾನೆ ಅಂತಾ ಗೊತ್ತಾಯಿತು ಆ ಮೂಲಕ ಅವರ ಆಸ್ತಿಯ ಬಗ್ಗೆ ಗೊತ್ತಾಗಿರುತ್ತದೆ. ಅವರಿಗೆ ಆಸ್ತಿ ಇರುತ್ತದೆ ಅಂತಾ ನನ್ನ ಮುತ್ತಜ್ಜನ ಕಾಲದಿಂದಲೂ ಗೊತ್ತಿರುತ್ತದೆ. ಸದರಿ ಆಸ್ತಿ ಕೋರ್ಟ ಆಫ್ ವಾರ್ಡ್ಸ ಆಸ್ತಿ ಅಂತಾ ಯಾವಾಗಿನಿಂದ ಗೊತ್ತು ಎಂದರೆ ನನ್ನ ಮುತ್ತಜ್ಜನ ಕಾಲದಿಂದಲೂ ಗೊತ್ತು. ನವಾಜಖಾತು 1970 ರೊಳಗೆ ತೀರಿಕೊಂಡಿರುತ್ತಾರೆ ನಿಖರವಾಗಿ ಗೊತ್ತಿಲ್ಲ. ಅವರು ಹುಬ್ಬಳ್ಳಿಯಲ್ಲಿ ತೀರಿಕೊಂಡಿರುತ್ತಾರೆ. ಅವರು ತೀರಿಕೊಂಡ ನಂತರ ಕೋರ್ಟ ಆಫ್ ವಾರ್ಡ್ಸ ಆಸ್ತಿ ಅವರ ಆಸ್ತಿ ನಮಗೂ ಬರಬೇಕು

ಅಂತಾ ಗೊತ್ತಿತ್ತು ಎಂದರೆ ಸರಿ. ಆ ಕಾರಣಕ್ಕಾಗಿ ಡಿಸಿ ಧಾರವಾಡ ಇವರಿಗೆ ಅರ್ಜಿ ಕೊಟ್ಟಿದ್ದೀರಾ ಎಂದರೆ ನಮ್ಮ ವಕೀಲರು ಎಲ್ಲಾ ಮಾಡಿರುತ್ತಾರೆ. ನವಾಜಖಾತು ತೀರಿಕೊಂಡ ನಂತರ ಕೊಟ್ಟಿರುತ್ತೀರಾ ಎಂದರೆ ಆಗ ಕೊಟ್ಟಿಲ್ಲ. ನಾವು ನವಾಜಖಾತು ವಂಶಸ್ಥರಲ್ಲ ಆದ್ದರಿಂದ ಆಸ್ತಿ ನಮಗೆ ಬರುವುದಿಲ್ಲ ಅಂತಾ ನಾವು ಆ ರೀತಿ ಯಾವುದೇ ಅರ್ಜಿ ಕೊಟ್ಟಿಲ್ಲ ಎಂದರೆ ಸರಿಯಲ್ಲ.

ನಾವು ನವಾಜಖಾತು ಇವರ ವಾರಸುದಾರರು ಇರುವುದರಿಂದ ಈ ದಾವೆ ಹಾಕಿರುತ್ತೇವೆ. ಈ ದಾವೆ ಹೂಡುವ ಮೊದಲು ಬೇರೆ ಒಂದು ದಾವೆ ಹೂಡಿದ್ದೆವು, ನಮ್ಮ ವಕೀಲರು ಸ್ವಲ್ಪ ವ್ಯತ್ಯಾಸ ಇದೆ ಅಂತಾ ಹೇಳಿದ್ದಕ್ಕೆ ಅದನ್ನು ಹಿಂಪಡೆದಿರುತ್ತೇವೆ. ಅದರ ಅಸಲು ದಾವೆ ನಂ.190/2009 ಎಂದರೆ ಸರಿ. ಸದರಿ ದಾವಾದ ಖಂಡಿಕೆ ನಂ.4 ರಲ್ಲಿ ಮಹಮ್ಮದಅಕ್ಬರಖಾನನಿಗೆ 4 ಜನ ಹೆಣ್ಣುಮಕ್ಕಳು ಒಬ್ಬ ಗಂಡು ಮಗ ಇರುತ್ತಾರೆ ಅಂತಾ ಬರೆಸಿದ್ದೇವೆ ಎಂದರೆ ಸರಿ ಸ್ವಲ್ಪ ತಪ್ಪಾಗಿತ್ತು ಆದ್ದರಿಂದ ತೆಗೆದಿರುತ್ತೇವೆ. ಅವರಿಗೆ ಮೂರೇ ಜನ ಮಕ್ಕಳು ಆದರೆ ತಪ್ಪಾಗಿ ನಾಲ್ಕು ಜನ ಅಂತಾ ಬರೆದಿರುತ್ತೇವೆ. ಅದರಲ್ಲಿ ಸಾಹೇಬಖಾತು ಗಂಡ ಕರೀಮಖಾನ ಬಿರಾದಾರನವಾಬ ಮತ್ತು ಅವರು ತೀರಿಕೊಂಡಿರುವ ದಿನಾಂಕ ಬರೆಸಿದ್ದೇವೆ ಎಂದರೆ ಸರಿ. ಮಹಮ್ಮದಅಕ್ಬರಖಾನನಿಗೆ ಇಬ್ಬರು ಹೆಂಡತಿಯರು ಇದ್ದರು. 2 ನೇ ಹೆಂಡತಿಗೆ ಮೂರು ಜನ ಮಕ್ಕಳು, ಅವರ ಹೆಸರು ಮುನ್ವರಖಾತು, ನವಾಜಖಾತು ಮತ್ತು ಮಹಿಬೂಬಅಲಿಖಾನ. 1 ನೇ ಹೆಂಡತಿಗೆ ಇಬ್ಬರು ಮಕ್ಕಳು ಅವರ ಹೆಸರು ಸಾಹೇಬಖಾತು ಮತ್ತು ಷಹಜಾದಖಾತು. ಹಾಗಾದರೆ ಮಹಮ್ಮದಅಕ್ಬರಖಾನನಿಗೆ 5 ಜನ ಮಕ್ಕಳು ಎಂದರೆ ಇಬ್ಬರು ತಾಯಂದಿರು ಒಬ್ಬನೇ ತಂದೆ ಇರುತ್ತಾನೆ. ನವಾಜಖಾತು ಮತ್ತು ಸಾಹೇಬಖಾತು ಒಬ್ಬನೇ ತಂದೆಯ ಮಕ್ಕಳು ಎಂದರೆ ಸರಿ ಆದರೆ ತಾಯಿ ಬೇರೆ ಇರುತ್ತಾರೆ. ಸಾಹೇಬಖಾತುಗೆ ಷಹಜಾದಬೇಗಂ 1 ನೇ ಪ್ರತಿವಾದಿ ಮೊಮ್ಮಗಳು ಎಂದರೆ ಸರಿ. ನವಾಜಖಾತುಗೆ 1 ನೇ ಪ್ರತಿವಾದಿ ಸಹೋದರಿಯ ಮೊಮ್ಮಗಳು ಆಗಬೇಕು ಎಂದರೆ ಖಾಸಾ ಸಹೋದರಿಯ ಮೊಮ್ಮಗಳು ಆಗುವುದಿಲ್ಲ. ಮಲತಾಯಿಯ ಮೊಮ್ಮಗಳು. 2 ನೇ ಪ್ರತಿವಾದಿಯನ್ನು ಏಕೆ ಕಕ್ಷಿಗಾರರನ್ನಾಗಿ ಮಾಡಿದ್ದೀರಿ ಎಂದರೆ ಅವರು ಮೋಸದಿಂದ ಈ ಹಿಂದೆ ಡಿಕ್ರಿ ಪಡೆದಿರುತ್ತಾರೆ ಆದ್ದರಿಂದ ಮಾಡಿರುತ್ತೇನೆ. ಈ ದಾವೆ ಮಾಡುವ ಮೊದಲು ನಾವು ಅವರಿಗೆ ಒಂದು ನೋಟಿಸು ಕೊಟ್ಟಿದ್ದೆವು ಎಂದರೆ ಸರಿಯಲ್ಲ. ಅದು ನಿಪಿ-97 ಅಂತಾ ಗುರುತಿಸಲಾಗಿದೆ ಎಂದರೆ ಸರಿಯಲ್ಲ. ಸದರಿ ನೋಟಿಸಿಗೆ 1 ಮತ್ತು 2 ನೇ ಪ್ರತಿವಾದಿಯರು ಉತ್ತರ ಕೊಟ್ಟಿರುತ್ತಾರೆ ಎಂದರೆ

ಸರಿಯಲ್ಲ. ಅದನ್ನು ನಿಪಿ-98 ಅಂತಾ ಗುರುತಿಸಲಾಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಮ್ಮ ವಕೀಲರು ಕೊಟ್ಟಿರಬಹುದು ನನಗೆ ಗೊತ್ತಿಲ್ಲ ಅಂತಾ ನುಡಿಯುತ್ತಾರೆ. ಅಸಲು ದಾವೆ ನಂ.190/2009 ನ್ನು ಪ್ರತಿವಾದಿ ನಂ.1 ಮತ್ತು 2 ಇವರು ನಮಗೆ ಹಿಸ್ಸೆ ಕೊಡುತ್ತಿಲ್ಲ ಅಂತಾ ದಾವಾ ಕಾರಣ ತೋರಿಸಿದ್ದೇವೆ ಎಂದರೆ ಸರಿಯಲ್ಲ. 2ನೇ ಪ್ರತಿವಾದಿ ಮುಸ್ತಾಕಖಾನ ಮಾತ್ರ ನಮ್ಮ ವಂಶಸ್ಥ. 1 ಮತ್ತು 2ನೇ ಪ್ರತಿವಾದಿ ಯಾವಾಗಿನಿಂದ ನಿಮಗೆ ಪರಿಚಯ ಎಂದರೆ ಮುಸ್ತಾಕಖಾನ ನನಗಿಂತಲೂ ದೊಡ್ಡವ ಮೊದಲಿನಿಂದಲೂ ಪರಿಚಯ. 2009 ರವರೆಗೆ ನಾವು ಅವರ ಮನೆಗೆ ಹೋಗುವುದು ಅವರು ನಮ್ಮ ಮನೆಗೆ ಬರುವುದು ಮಾಡುತ್ತಿದ್ದೆವು. 2009 ರ ಮುಂಚೆ ಅವರ ಮನೆಯಲ್ಲಿ ಏನೇನು ನಡೆಯುತ್ತದೆ ಅಂತಾ ನನಗೆ ಗೊತ್ತಿತ್ತು ಎಂದರೆ ಸರಿ 2009 ರ ನಂತರ ಅವರ ಮನೆಯಲ್ಲಿ ಸತ್ತರೆ ನಾವು ಹೋಗುವುದಿಲ್ಲ ನಮ್ಮ ಮನೆಯಲ್ಲಿ ಸತ್ತರೆ ಅವರು ಬರುವುದಿಲ್ಲ. ಅಸಲು ದಾವೆ ನಂ.171/1984 ರ ಡಿಕ್ರಿ ಬಗ್ಗೆ ನನಗೆ ಮೊದಲೇ ಗೊತ್ತಿತ್ತು ಎಂದರೆ ಸರಿಯಲ್ಲ, ಸದರಿ ವಿಷಯ 2009 ರಲ್ಲಿ ಗೊತ್ತಾಗಿರುತ್ತದೆ. ಅಸಲು ದಾವೆ ನಂ.171/1984 ರ ಕುರಿತು ಯಾವುದೇ ಮಾಹಿತಿ ಇರುವುದಿಲ್ಲ. ಅದರಲ್ಲಿ ಏನು ಪರಿಹಾರ ಕೇಳಿದ್ದರು, ಯಾವ ದಾಖಲೆ ಹಾಜರುಪಡಿಸಿರುತ್ತಾರೆ ಏನು ಗೊತ್ತಿಲ್ಲ. ಸದರಿ ದಾವೆ ತೀರ್ಪಿನ ವಿರುದ್ದ ಆರ್ ಎ ನಂ.16/1996 ನ್ನು ದಾಖಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಅದು ದಿನಾಂಕಃ 17.12.1998 ರಂದು ಆರ್ ಎ ವಜಾ ಆಗಿ ಡಿಕ್ರಿ ಕನಫರಮ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಂತರ ಆರ್ ಎಸ್ ಎ ನಂ.277/1999 ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದು ಸಹ ದಿನಾಂಕಃ 28.02.2000 ರಂದು ವಜಾ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಕೆ ಎಸ್ ಆರ್ ಟಿ ಸಿ ಯವರು ಆರ್ ಎಸ್ ಎ ನಂ.130/1999 ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಅದು ಸಹ ವಜಾ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ದಾವೆಯಲ್ಲಿ ಕಟ್ಟಡಗಳು, ಜಮೀನುಗಳು ಮತ್ತು ಮನೆಗಳು ಇರುತ್ತವೆ. ಹಣ, ಬಂಗಾರ ಮತ್ತು ವಾಹನಗಳು ಸಹ ಇರುತ್ತವೆ ಅವು ಡಿಸಿಯವರ ಕಬ್ಜೆಯಲ್ಲಿದ್ದವು ಅವುಗಳನ್ನು ಪ್ರತಿವಾದಿಯರು ತೆಗೆದುಕೊಂಡಿರುತ್ತಾರೆ. ಅವುಗಳನ್ನು ಯಾವಾಗ ತೆಗೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ 2009 ರಲ್ಲಿ ಈ ವಿಷಯ ನನಗೆ ಗೊತ್ತಾಗಿದೆ. ಆಸ್ತಿಗಳನ್ನು ಡಿಸಿಯವರ ಜೊತೆ ಮೀಲಾಪಿಯಾಗಿ ಡಿಸಿಯವರಿಗೆ ದುಡ್ಡು ಕೊಟ್ಟು ಪ್ರತಿವಾದಿಯರು

ಆಸ್ತಿಗಳನ್ನು ಪಡೆದುಕೊಂಡಿರುತ್ತಾರೆ, ಅವುಗಳನ್ನು ಮಾರಾಟ ಮಾಡುವಾಗ ಈ ವಿಷಯ ನನಗೆ ಗೊತ್ತಾಗಿದೆ. ಜಿನ್ನಿಂಗ್ ಮತ್ತು ಕ್ರಶಿಂಗ್ ಫ್ಯಾಕ್ಟರಿ ಇತ್ತು ಅಂತಾ ಬರೆಸಿದ್ದು ಅದು ಸವಣೂರಿನಲ್ಲಿ ಇತ್ತು. ಅದನ್ನು ಸರದಾರ ಮಹಿಬೂಬಅಲಿಖಾನ ಸ್ಥಾಪನೆ ಮಾಡಿದ್ದರು. ಅವರು ತೀರಿಕೊಂಡ ಮೇಲೆ ಅದು ಬಂದ್ ಆಗಿರುತ್ತದೆ. ಈಗ ಅಲ್ಲಿ ಕೆ.ಎಸ್.ಆರ್.ಟಿ.ಸಿ ಬಸ್ ಡಿಪೋ ಇದೆ. ಅದು ಯಾವಾಗ ಆಗಿರುತ್ತದೆ ನನಗೆ ಗೊತ್ತಿಲ್ಲ. 1992 ರಲ್ಲಿ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಕೆ.ಎಸ್.ಆರ್.ಟಿ.ಸಿ ಯ ಆಸ್ತಿಯ ಕುರಿತು ಕೇಸುಗಳು ಇರುತ್ತವೆ ಎಂದರೆ ನನಗೆ ಗೊತ್ತಿಲ್ಲ.

ಕೆ.ಎಸ್.ಆರ್.ಟಿ.ಸಿ ಯವರು ಅಸಲು ದಾವೆ ನಂ.6/1999 ನ್ನು ದಾಖಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಸ್ವತಃ 2010 ರ ನಂತರ ಸದರಿ ದಾವೆಯಲ್ಲಿ ನಾವು ಸೇರ್ಪಡೆಯಾಗಿರುತ್ತೇವೆ ಅಂತಾ ನುಡಿಯುತ್ತಾರೆ. ಆದಾದ ನಂತರ ಆರ್ ಎ ನಂ.18/2007 ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆರ್ ಎ ದಲ್ಲಿ ಅಸಲು ದಾವೆ ನಂ.171/1984 ಸಹ ಕನಫರಮ್ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ನನಗೆ ಕನ್ನಡ ಓದಲು ಬರುತ್ತದೆ. ಅಸಲು ದಾವೆ ನಂ.39/2001 ನ್ನು ಸವಣೂರಿನ ಸಾರ್ವಜನಿಕರು 1ನೇ ಪ್ರತಿವಾದಿಯ ವಿರುದ್ದ ಅಸಲು ದಾವೆ ನಂ.171/1984 ತಪ್ಪು ಇರುತ್ತದೆ ಅಂತಾ ದಾವೆ ಹಾಕಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆ ವಜಾ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣ ನಡೆಯುವಾಗ ಅದರಲ್ಲಿರುವ ವಾದಿಯರು ಸಾರ್ವಜನಿಕ ಹಿತಾಸಕ್ತಿ ನೋಟಿಸನ್ನು ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಅಸಲುದಾವೆ ನಂ.249/2014 ತಬರೇಜಖಾನ ಬಿರಾದಾರ ಇವರು ಪ್ರತಿವಾದಿ ನಂ.1 ಮತ್ತು 2 ರವರ ವಿರುದ್ದ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ತಬರೇಜಖಾನ ಮತ್ತು ನಾನು ಕೂಡಿಯೇ ಇರುತ್ತೇವೆ ಎಂದರೆ ಸರಿ. ಈ ದಾವೆ ಅಥವಾ ಸದರಿ ದಾವೆ ಮಾಡುವಾಗ ನಾವಿಬ್ಬರೂ ಚರ್ಚೆ ಮಾಡಿರುತ್ತೇವೆ ಎಂದರೆ ಸರಿ. ಈ ಪ್ರಕರಣದಲ್ಲಿರುವ ವಾದಿ ನಂ.8,10,13 ಮತ್ತು ನಾನು ಕೂಡಿಯೇ ಯಾವುದೇ ಮಾಹಿಡಿಯನ್ನು ಕೊಡಬೇಕಾದರೆ ಚರ್ಚಿಸಿ ಕೊಟ್ಟಿರುತ್ತೇವೆ ಎಂದರೆ ಸರಿ. ನಾವೆಲ್ಲರೂ ಯಾವಾಗಲೂ ಕೂಡಿಯೇ ಇರುತ್ತೆವೇ ಎಂದರೆ ಸರಿ. ಏನಾದರೂ ಮಾಡುವುದಾದರೆ ನಮಗೆ ತಿಳಿಸಿಯೇ ಮಾಡುತ್ತಾರೆ ಮತ್ತು ನಾವು ಏನಾದರೂ ಮಾಡುವುದಾದರೆ ಅವರಿಗೆ ತಿಳಿಸಿಯೇ ಮಾಡಿರುತ್ತೇವೆ ಎಂದರೆ ಸರಿ. ಒಂದೊಂದು ಸಾರಿ ಊರಲ್ಲಿ ಇಲ್ಲದಾಗ ಮಾತ್ರ ತಿಳಿಸಿರುವುದಿಲ್ಲ. ಊರಿಂದ ಬಂದ ನಂತರ ತಿಳಿಸುತ್ತಾರೆ

ಎಂದರೆ ಸರಿ. ಸದರಿ ಅಸಲು ದಾವೆ ನಂ.249/2014 ನ್ನು ವಾದಿ ನಂ.8 ಇವರು ಹಿಂದೆ ಪಡೆದಿರುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ. ವಾದಿ ನಂ.8,10,13 ಇವರ ಸಹಿಗಳನ್ನು ಗುರುತಿಸುತ್ತೇನೆ. ಈ ದಾವೆ ಸಲ್ಲಿಸುವ ಮೊದಲು ಕೋರ್ಟ ಆಫ್ ವಾರ್ಡ್ಸ ರವರಿಗೆ ನೋಟಿಸು ಕೊಟ್ಟಿರುತ್ತೇವೆಯೋ ಇಲ್ಲವೋ ನನಗೆ ಗೊತ್ತಿಲ್ಲ ನಮ್ಮ ವಕೀಲರಿಗೆ ಗೊತ್ತು. ನಾವು ಸುಳ್ಳು ವಂಶವೃಕ್ಷ ತೋರಿಸಿ ದಾವೆ ಮಾಡಿದ್ದೇನೆ ಎಂದರೆ ಸರಿಯಲ್ಲ. ಮಹಮ್ಮದಲಿಅಕ್ಬರಖಾನ ಇವರ ಕೆಳಗೆ ನಿಜ ಇರುವ ವಂಶವೃಕ್ಷ ಮತ್ತು ಅದರ ಮೇಲೆ ಇರುವ ವಂಶವೃಕ್ಷ ತಪ್ಪು ಇರುತ್ತದೆ ಎಂದರೆ ಸರಿಯಲ್ಲ.

ದಿನಾಂಕಃ 22.04.2006 ರಂದು ಡಿಸಿ ಕೋರ್ಟ ಆಫ್ ವಾರ್ಡ್ಸ ಧಾರವಾಡ ಇವರು ನೋಟಿಸು ನೀಡಿದ್ದು ಅದರ ಪ್ರಕಾರ ಕರ್ನಾಟಕ ರಾಜ್ಯ ಪತ್ರ ಮೇ 18, 2006 ರಂದು ಪಬ್ಲಿಷ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು 2013 ರಲ್ಲಿ ಡಬ್ಲ್ಯೂಪಿ ನಂ.82837/2013 ಸಲ್ಲಿಸಿದ್ದೆವು ಎಂದರೆ ಸರಿ. ಪ್ರತಿವಾದಿಯರ ಕಬ್ಜೆಯಲ್ಲಿರುವ ಆಸ್ತಿಗಳನ್ನು ಮರಳಿ ಪಡೆಯುವಂತೆ ರಿಟ್ ಸಲ್ಲಿಸಿದ್ದೆ ಎಂದರೆ ಸರಿ. ಅದು ವಜಾ ಆಗಿರುತ್ತದೆ ಎಂದರೆ ಸರಿ. ಅದರ ವಿರುದ್ದ ರಿಟ್ ಅಪೀಲು ನಂ.100371/2014 ಸಲ್ಲಿಸಿದ್ದೆವು ಎಂದರೆ ಸರಿ. ಅದು ಸಹ ವಜಾ ಆಗಿರುತ್ತದೆ ಎಂದರೆ ಸರಿ. ನಾವು ಉಪ ವಿಭಾಗಾಧಿಕಾರಿ ಸವಣೂರು, ಜಿಲ್ಲಾಧಿಕಾರಿ ಹಾವೇರಿ ಮತ್ತು ಧಾರವಾಡ ಇವರ ಮುಂದೆ ಪ್ರತಿವಾದಿ ನಂ.1 ಮತ್ತು 2 ಇವರ ಹೆಸರುಗಳನ್ನು ಆಸ್ತಿಗಳಿಂದ ಕೈಬಿಡುವಂತೆ ಆರ್ ಟಿ ಎಸ್ ಅರ್ಜಿ ಮತ್ತು ಅಪೀಲುಗಳನ್ನು ಸಲ್ಲಿಸಿದ್ದು ಅವುಗಳು ವಜಾ ಆಗಿರುತ್ತವೆ ಎಂದರೆ ಸರಿ. ಅಸಲು ದಾವೆ ನಂ.39/2001 ರ ದಾವೆ ಕುರಿತು ಪತ್ರಿಕೆಯಲ್ಲಿ ಬಂದಿತ್ತು ಅದರ ಬಗ್ಗೆ ನನಗೆ ಮಾಹಿತಿ ಇರುತ್ತದೆ ಎಂದರೆ ಸರಿಯಲ್ಲ. ಆಗ ನಾನು, ವಾದಿ ನಂ.8,10,13 ರವರು ಪ್ರತಿವಾದಿ ನಂ.1 ರವರ ಮನೆಗೆ ಹೋಗಿ ಅವರಿಗೆ ಸಪೋರ್ಟ್ ಮಾಡುವುದಾಗಿ ಹೇಳಿರುತ್ತೇವೆ ಎಂದರೆ ಸರಿಯಲ್ಲ. ಆಗ ಸದರಿ ದಾವೆಯಲ್ಲಿ ಸೇರ್ಪಡೆಯಾಗಲು ಅರ್ಜಿ ಸಹ ತಯಾರಿಸಿದ್ದೇವು ಎಂದರೆ ಸರಿಯಲ್ಲ. ಆಗ ಪ್ರತಿವಾದಿ ನಂ.1 ಇವರಿಗೆ ನಮಗೆ ಹಿಸ್ಸೆ ಕೊಟ್ಟರೆ ಮಾತ್ರ ಸಪೋರ್ಟ್ ಮಾಡುತ್ತೇವೆ ಅಂತಾ ಹೇಳಿರುತ್ತೇವೆ ಎಂದರೆ ಸರಿಯಲ್ಲ. ಈ ದಾವೆಯನ್ನು ಹಿಸ್ಸೆ ದಿಸ್ಸೆಗಾಗಿ ಸಲ್ಲಿಸಿಲ್ಲ ನಾವು ವಾರಸುದಾರರು ಇರುತ್ತೇವೆ ನಮಗೂ ಹಕ್ಕು ಇರುತ್ತದೆ ಅಂತಾ ಅದನ್ನು ಘೋಷಿಸಲು ಕೇಳಿದ್ದೇವೆ. ಕೆಲವೊಂದು ಆಸ್ತಿಗಳನ್ನು 1 ಮತ್ತು 2 ನೇ ಪ್ರತಿವಾದಿಯರು ತಹಶೀಲ್ದಾರ, ಉಪವಿಭಾಗಾಧಿಕಾರಿ ಮತ್ತು ಜಿಲ್ಲಾಧಿಕಾರಿ

ಜೊತೆ ಮೀಲಾಪಿಯಾಗಿ ಪಡೆದುಕೊಂಡಿರುತ್ತಾರೆ ಇನ್ನೂ ಸಾಕಷ್ಟು ಆಸ್ತಿಗಳು ಸರಕಾರದ ವಶದಲ್ಲಿರುತ್ತವೆ. ಅಸಲು ದಾವೆ ನಂ.171/1984 ರಲ್ಲಿ ಡಿಕ್ರಿ ಸರಿ ಇರುತ್ತದೆ ಅದರಲ್ಲಿ ಯಾವ ಮೊಸ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಅವರು ನ್ಯಾಯಾಲಯಕ್ಕೆ ಮೋಸ ಮಾಡಿ ಡಿಕ್ರಿ ಪಡೆದುಕೊಂಡಿರುತ್ತಾರೆ. ನಾವು ನವಾಜಖಾತುಗೆ ವಾರಸುದಾರರು ಅಲ್ಲ, ಯಾವುದೇ ರೀತಿಯ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಕೋರ್ಟ ಆಫ್ ವಾರ್ಡ್ಸ ಆಸ್ತಿ ಸೇರಿ ಮೃತ್ಯು ಪತ್ರದ ಆಧಾರದ ಮೇಲೆ ಮಿಸಲೆನಿಯಸ್ ನಂ.43/2018 ಸಲ್ಲಿಸಿದ್ದು ಅದು ಸಹ ವಜಾ ಆಗಿರುತ್ತದೆ ಎಂದರೆ ಸರಿ. ನವಾಜಖಾತುಗೆ ನಾವು ಯಾವುದೇ ರೀತಿಯ ಸಂಬಂಧ ಇಲ್ಲದಿದ್ದರೂ ಸಹ ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇವೆ ಎಂದರೆ ಸರಿಯಲ್ಲ.

**ಪ್ರತಿವಾದಿ ನಂ.3 ಮತ್ತು 4 ರ ಪರ ವಕೀಲರು ಕೂಗಿಸಲಾಗಿ ಗೈರು ಹಾಜರು ಇದ್ದು ಅವರ ಪರ ಪಾಟೀ ಸವಾಲು ಇಲ್ಲ ಅಂತಾ ತೆಗೆದುಕೊಳ್ಳಲಾಯಿತು.**

**ಪ್ರತಿವಾದಿ ನಂ.29 ಎಸ್ ಪಿ ಜೆ ವಕೀಲರನ್ನು ಕೂಗಿಸಲಾಗಿ ಗೈರು ಹಾಜರು ಇದ್ದು ಅವರ ಪರ ಪಾಟೀ ಸವಾಲು ಇಲ್ಲ ಅಂತಾ ತೆಗೆದುಕೊಳ್ಳಲಾಯಿತು.**

**ಉಳಿದ ಪ್ರತಿವಾದಿಯರು ಪ್ರತಿವಾದಪತ್ರ ಸಲ್ಲಿಸಿರುವುದಿಲ್ಲ. ಆದ್ದರಿಂದ ಅವರ ಪರ ಪಾಟೀ ಸವಾಲು ಇಲ್ಲ ಅಂತಾ ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.ಸವಣೂರು.